**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ದಿನಾಂಕ:18.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ.ಸಿ.ಎನ್.ಹೆಚ್.ವಕೀಲರಿಂದ:**

ನನ್ನ ತಾಯಿಯ ಹೆಸರು ಚೆನ್ನಮ್ಮ. 1ನೇ ವಾದಿಯ ತಾಯಿಯ ಹೆಸರು ಕೆಂಪಮ್ಮ.ನನ್ನ ತಾಯಿ ಮತ್ತು 1 ನೇ ವಾದಿಯ ತಾಯಿ ಸ್ವಂತ ಅಕ್ಕತಂಗಿಯರು ಎಂದರೆ ಸರಿ. ನನ್ನ ಮಗನ ಹೆಸರು ರವಿ ಮತ್ತು ಸೊಸೆಯ ಹೆಸರು ಮಂಜುಳ ಎಂದರೆ 3 ನೇ ವಾದಿ. 1ನೇ ವಾದಿಯ ತಂದೆ ರಂಗಯ್ಯರವರು ಬೆಂಗಳೂರಿನಲ್ಲಿ ಹಿಂದಿನಿಂದಲೂ ವಾಸವಿದ್ದರು ಎಂದರೆ ಸರಿ. 1 ರಿಂದ 3 ನೇ ವಾದಿಗಳು ಬೆಂಗಳೂರಿನಲ್ಲಿ ಹುಟ್ಟಿ ಬೆಳೆದಿರುತ್ತಾರೆ ಎಂದರೆ ಸರಿ. ಸದರಿ ರಂಗಯ್ಯರವರು ಬೆಂಗಳೂರಿನಲ್ಲೇ ಕೆಲಸ ಮಾಡಿಕೊಂಡು ವಾಸವಿದ್ದರು ಎಂದರೆ ಸರಿ. 1ನೇ ವಾದಿ ಬೆಂಗಳೂರಿನಲ್ಲೇ ಕೆಲಸ ಮಾಡುತ್ತಿದ್ದರು ಎಂದರೆ ಸರಿ.

2. 1ನೇ ವಾದಿಯ ತಾತನ ಹೆಸರು ರಂಗೇಗೌಡ. ಅವರಿಗೆ ರಂಗಯ್ಯ ಮತ್ತು ರಂಗಯ್ಯ ಎಂಬ ಇಬ್ಬರು ಮಕ್ಕಳಿರುತ್ತಾರೆ. ರಂಗಯ್ಯರವರಿಗೆ ಕೆಂಪಣ್ಣ, ಕೃಷ್ಣ ಮತ್ತು 1 ನೇ ವಾದಿ 3 ಜನ ಮಕ್ಕಳಿರುತ್ತಾರೆ. ಮೊದಲನೇ ಮಗ ಕೃಷ್ಣರವರಿಗೆ 3 ಜನ ಮಕ್ಕಳಿರುತ್ತಾರೆ ಅವರೆಂದರೆ ಶೈಲ , ಉಮೇಶ ಮತ್ತು ಜಯಲಕ್ಷ್ಮಮ್ಮ. ರಂಗೇಗೌಡರ ಮತ್ತೊಬ್ಬ ಮಗ ರಂಗಯ್ಯರವರಿಗೆ ಎಷ್ಟು ಜನ ಮಕ್ಕಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

3. ನನ್ನ ತಾಯಿಯ ಊರು ನೆಟ್ಟೆಕೆರೆ. ನನ್ನನ್ನು ಪೆಂಡಾರಹಳ್ಳಿಯ ಗಂಗಾಧರಯ್ಯರವರಿಗೆ ವಿವಾಹ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ವಿವಾಹದ ನಂತರ ನಾನು ಗಂಡನ ಮನೆಯಲ್ಲಿ ವಾಸವಿರುತ್ತೇನೆ ಎಂದರೆ ಸರಿ. ಆದ್ದರಿಂದ ನೆಟ್ಟೆಕೆರೆ ಗ್ರಾಮದಲ್ಲಿ ಇರುವ ಜಮೀನುಗಳಲ್ಲಿ ಯಾರು ಸ್ವಾಧೀನದಲ್ಲಿರುತ್ತಾರೆ ಮತ್ತು ಯಾರು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ. ರಂಗಯ್ಯರವರಿಗೆ 1,2 ನೇ ಪ್ರತಿವಾದಿಗಳು ಮತ್ತು ರಂಗಮ್ಮ ಎಂಬ ಮಗಳಿರುತ್ತಾರೆ. ಸದರಿ ರಂಗಯ್ಯರವರಿಗೆ ಕಾವೇಟಪ್ಪ ,ಮಾದೇಗೌಡ, ಚೌಡಯ್ಯ,ಎಂಬ ಅಣ್ಣ ತಮ್ಮಂದಿರು. ಮಾದೇಗೌಡರವರಿಗೆ 3 ಜನ ಮಕ್ಕಳು. ಚೌಡಯ್ಯರವರಿಗೆ ಚೆನ್ನಮ್ಮ ಮತ್ತು 2 ಮತ್ತು 5 ನೇ ಪ್ರತಿವಾದಿಗಳು ಮಕ್ಕಳಿರುತ್ತಾರೆ.

4. 1 ನೇ ಪ್ರತಿವಾದಿಯ ತಂದೆ ಮತ್ತು ಅವರ ಅಣ್ಣತಮ್ಮಂದಿರು ಅವರ ಕುಟುಂಬದ ಆಸ್ತಿಗಳನ್ನು ಸುಮಾರು 50 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗದ ಮುಖಾಂತರ ಅವರ ಭಾಗಗಳಿಗೆ ಬಂದ ಜಮೀನುಗಳ ಖಾತೆ ಮತ್ತು ಪಹಣಿ ವರ್ಗಾಯಿಸಿಕೊಂಡು ಪ್ರತ್ಯೇಕ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗಳು ಅವರ ತಂದೆಯರ ಭಾಗಕ್ಕೆ ಬಂದ ಜಮೀನುಗಳನ್ನು 1972 ರಲ್ಲಿ ವಿಭಾಗಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗದ ಮುಖಾಂತರ ಅವರ ಭಾಗಗಳಿಗೆ ಬಂದ ಜಮೀನುಗಳ ಖಾತೆ ಮತ್ತು ಪಹಣಿ ವರ್ಗಾಯಿಸಿಕೊಂಡು ಪ್ರತ್ಯೇಕ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ದಾವಾಸ್ವತ್ತಿನ ಸ.ನಂ: ನನಗೆ ಗೊತ್ತಿಲ್ಲ. ದಾವಾಸ್ವತ್ತಿನ ಸ್ವಾಧೀನದಲ್ಲಿ 1 ನೇ ಪ್ರತಿವಾದಿ ಇರುತ್ತಾರೆ ಎಂದರೆ ಸರಿ. ದಾವಾಸ್ವತ್ತಿನಲ್ಲಿ ಸ್ವಲ್ಪ ಭಾಗವನ್ನು 1 ನೇ ಪ್ರತಿವಾದಿ 10 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಉಳಿದ ಜಮೀನಿನಲ್ಲಿ1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ದಾವಾಸ್ವತ್ತು 1 ನೇ ಪ್ರತಿವಾದಿಯ ಭಾಗಕ್ಕೆ ವಿಭಾಗದಲ್ಲಿ ಬಂದ ದಿನಾಂಕದಿಂದ ಅವರೇ ಅದರ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ.

5. ದಾವಾಸ್ವತ್ತಿನ ವಿಸ್ತೀರ್ಣ 5 ಎಕರೆ 6 ಗುಂಟೆ ಅದರ ಚಕ್ಕುಬಂದಿ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯನ್ನು ಎಷ್ಟು ಜನ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ವಾದಿ ಭಾಗಾಂಶ ಕೋರಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಸಾಕ್ಷ್ಯ ಹೇಳಲು 2 ನೇ ವಾದಿ ನನ್ನನ್ನು ಕರೆದುಕೊಂಡು ಬಂದಿರುತ್ತಾರೆ. 2 ನೇ ವಾದಿ ಹೇಳಿದಂತೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿರುವ ವಿಚಾರವನ್ನು 2 ನೇ ವಾದಿ ಹೇಳಿ ಬರೆಸಿರುತ್ತಾರೆ ಅದರಲ್ಲಿರುವ ವಿಚಾರ ನನಗೆ ತಿಳಿದಿಲ್ಲ ಎಂದರೆ ಸರಿ. ದಾವಾಸ್ವತ್ತು 1 ನೇ ಪ್ರತಿವಾದಿಗೆ ಸೇರಿದ್ದು ಅದಕ್ಕೂ ವಾದಿಗಳಿಗೂ ಯಾವುದೇ ಸಂಬಂದ ಇಲ್ಲದಿದ್ದರೂ ಅವರು ಸುಳ್ಳು ದಾವೆ ಸಾಲ್ಲಿಸಿದ್ದು ಅವರಿಗೆ ಸಹಾಯಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**